ಫಾಲನೇತ್ರ ಸಜ್ಜನ, ಶಿರಸಿ

◆ ಬ್ಯಾಟರಿ ಚಾರ್ಜ್ ಆಗಲು ಡಿಸ್ಟಿಲ್ಡ್ ವಾಟರ್ ಬೇಕು. ಮಂತ್ರಿಗಳು ಚಾರ್ಜ್ ಆಗಲು?




ಡಿಸ್ಟಿಲರಿಯ ದ್ರವ.

ಎಸ್.ಎನ್. ಮಹಾಬಲರಾವ್, ಎನ್ಆರ್‌ಪುರ

◆ ಸಿನಿಮಾಕ್ಕೆ ಕರೆದರೆ ಅವಳು ಬರುತ್ತಿಲ್ಲವಲ್ಲಾ.....?

ಥಿಯೇಟರಿನಲ್ಲಿ ಸೆಲ್ಫಿ ತೆಕ್ಕೊಳೋಣ ಬಾ ಅನ್ನಿ. ಇಂದಿನವರು ಸೆಲ್ಫಿಗೆ ಪ್ರಾಣವನ್ನೂ ಬಿಡುತ್ತಾರೆ.


ಮೋಹನರಾಜು ಎಸ್.ಎ. ಶಿವಮೊಗ್ಗ

◆ ಪ್ರೇಮಬರಹ ನೂರು ತರಹ, ಹಣೆಬರಹ?

ಒಂದೇ ತರಹ. ಅಂತಹ ಲಿಪಿಯೇ ತಿಳಿಯದಷ್ಟು ಕೆಟ್ಟ ಹ್ಯಾಂಡ್‌ರೈಟಿಂಗ್ ಇನ್ನೊಂದಿಲ್ಲ.

ಮಹೇಶ್, ನೆಲಮಂಗಲ

◆ ಇಲ್ಲಿ ಒಬ್ಬರು ಕಾಶಿಗೆ ವಿಮಾನದಲ್ಲಿ ಹೋಗಿಬಂದಿದ್ದಾರೆ. ಅವರಿಗೆ ಪ್ರಾಪ್ತಿ ಸಿಕ್ಕಿದೆಯೇ?



ಸಿಕ್ಕಿರುತ್ತದೆ. ನನಗೆ ತಿಳಿದಮಟ್ಟಿಗೆ ಕಾಶಿ ವಿಶ್ವನಾಥನ ಸ್ತುತಿಯಲ್ಲಿ 'ವಿಮಾನಯಾತ್ರಿ ಶತ್ರುವೇ ನಮಃ' ಎಂಬ ಮಂತ್ರ ಇಲ್ಲ.

ಪಿ.ಎನ್. ಶ್ರೀವತ್ಸ, ಬೆಂಗಳೂರು

◆ ವಯಸ್ಸಾಗುತ್ತಿದ್ದಂತೆ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಸುಲಭ ಮಾರ್ಗವೇನಾದರೂ ಇದೆಯಾ?

ಇದೆಯಲ್ಲ. ತಲೆಗೆ ತೈಲವಲ್ಲದೆ ಬೇರೇನನ್ನೂ ಹಚ್ಚಿಕೊಳ್ಳದಿದ್ದರಾಯ್ತು. ಚಿಂತೆ ಬಿಟ್ಟವನಿಗೆ ಚಿತೆ ದೂರ.

ವಿ. ಹಮೀದ್, ವಿಟ್ಲ

◆ ಇಲ್ಲೊಬ್ಬ ವಿವಾಹಿತೆ ಅವಿವಾಹಿತ ತರುಣನನ್ನು ಪ್ರೀತಿಸುತ್ತಾಳೆ. ಏಕಿರಬಹುದು ಸಾರ್?

ವಿವಾಹಿತೆ 30ರಂತೆ ಕಾಣುವ 45ರ ಚೆಲುವೆ. ಅವಿವಾಹಿತ ತರುಣ ಅವಳ ಮಗ.

ಕುಮಾರ ಚಲವಾದಿ, ಹಾಸನ

◆ ಪರಸ್ತ್ರೀಯನ್ನು ಸಹೋದರಿಯಂತೆ ನೋಡುವುದು ಹೇಗೆ?

ಎಕ್ಸ್‌ರೇ ದೃಷ್ಟಿಯನ್ನು ಬಿಟ್ಟು ಸಹಜ ದೃಷ್ಟಿಯಿಂದ ನೋಡಲು ಆರಂಭಿಸಿ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

◆ ಗುಡಿಯಲ್ಲಿ ಏಕೆ ಗಲಾಟೆ, ಬಾರ್‌ನಲ್ಲಿ ಏಕೆ ನಿಃಶಬ್ದ?

ಭಕ್ತಿಪಂಥವೇ ಹಾಗೆ; ಪರಮಾತ್ಮ ಹೊರಗಿದ್ದಾಗ ಸದ್ದು; ಪರಮಾತ್ಮ ನಿನ್ನೊಳಗೇ ಸೇರಿದಾಗ ನಿಃಶಬ್ದ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

◆ ಆಧುನಿಕತೆಯನ್ನು ನಾವು ಒಪ್ಪಿಕೊಂಡಾಗ ದೇಸೀ ಕಸುಬುಗಳು ಮರೆಯಾಗುವುದನ್ನು ಪ್ರಗತಿಯೆನ್ನಬೇಕೋ, ನಾಶ ಎನ್ನಬೇಕೋ?

ಅಪ್ಪ ನಿವೃತ್ತನಾಗಿ, ಮಗ ವರ್ಧಿಸಿದರೆ ಅದು ಅಪ್ಪನ ನಾಶವಲ್ಲ. ಸಂಸಾರದ ಸದೃಢ ಪ್ರಗತಿ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

◆ ಬಡ್ತಿಗಳಿಗೆ ಸೀನಿಯಾರಿಟಿ ಇರುವಂತೆ ಮರಣಕ್ಕೆ ಸೀನಿಯಾರಿಟಿ ಇಲ್ಲವೇಕೆ?

ತನ್ನ ಲೋಕದಲ್ಲಿ ಬರೀ ಮುದುಕರೇ ಇದ್ದರೆ ಲವಲವಿಕೆ ಇರುವುದಿಲ್ಲವೆಂದು ಎಲ್ಲ ವಯಸ್ಸಿನವರನ್ನೂ ಕರೆದೊಯ್ಯುವನಂತೆ ಯಮ.

ಹಾಡ್ಯ ಬ. ಜಯಾನಂದ, ಮೈಸೂರು

◆ ಇನ್ನೊಬ್ಬರ ಮೇಲೆ ಒರಗಿ ನಿಲ್ಲುವವನು ನಾಯಕ ಹೇಗಾದಾನು?

ಹ್ಞ! ನಮ್ಮ ದೇಶದಲ್ಲಿ ಚಟ್ಟಕ್ಕೆ ಒರಗುವವರೂ ನಾಯಕರಾಗಿರುವಾಗ ಇದೇನು ಮಹಾ!

ವಿ. ಹೇಮಂತಕುಮಾರ್, ಬೆಂಗಳೂರು

◆ ಪ್ರೇಮಿಗಳಿಗೆ ಪ್ರಪಂಚವೆಲ್ಲಾ ಉದ್ಯಾನವನವಂತೆ; ಹೌದಾ ರಾಮ್‌ಜಿ?

ಊಹೂಂ. ಒಂಟಿ ಇದ್ದಾಗ ಧ್ಯಾನವನ, ಒಟ್ಟಿಗಿದ್ದಾಗ ಉದ್ಯಾನವನ, ಕೈ ಕೊಟ್ಟರೆ ಅಧ್ವಾನವನ.

## ಬಹುಮಾನಿತ ಪ್ರಶ್ನೆ

ಪಿ. ಚಿದಾನಂದ, ಚಿತ್ರದುರ್ಗ

◆ ಭ್ರಷ್ಟರೇ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕು ಎನ್ನುತ್ತಾರಲ್ಲಾ...?

ಎಂತೆಂತಹ ರಸಿಕ ಸ್ವಾಮೀಜಿಗಳೂ 'ಕಾಮವನ್ನು ಜಯಿಸಬೇಕು' ಎಂದು ಬೋಧಿಸುತ್ತಿಲ್ಲವೆ... ಇದೂ ಹಾಗೆಯೇ.

ಹೆಚ್. ಗೋಪಿನಾಥ್, ಬಳ್ಳಾರಿ

◆ ಪುಣ್ಯವಂತರಿಗಿಂತ ಪಾಪಿಗಳು ಹೆಚ್ಚಾಗುತ್ತಿರುವುದನ್ನು ಭೂತಾಯಿ ಹೇಗೆ ಸಹಿಸಿಕೊಳ್ಳುತ್ತಿದ್ದಾಳೆ?

ಆಗಾಗ್ಗೆ ಜಿಗುಪ್ಸೆಯಿಂದ ಮೈ ನಡುಗಿಸುತ್ತಾ.

ಎಂ.ಎ. ಕುಮಾರ್, ಬೆಂಗಳೂರು

◆ ಆಕಸ್ಮಿಕವಾಗಿ ಹೆಣ್ಣಿಗೆ ಹೇರಳವಾದ ಹಣ ಬಂದಲ್ಲಿ ಮೊದಲ ಆದ್ಯತೆ ಯಾವುದಕ್ಕೆ?

ತವರಿಗೆ! ತವರು ತಗಡು ಕೊಟ್ಟರೂ ಬದಲಿಗೆ ಚಿನ್ನ ಕೊಡಬಯಸುವುದು ಎಲ್ಲ ಹೆಣ್ಣುಮಕ್ಕಳ ಗುಣ.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ

◆ ಲೇಖಕ ಎಸ್.ಎಲ್. ಭೈರಪ್ಪನವರಿಗೆ ಇನ್ನೂ ಜ್ಞಾನಪೀಠ ಪ್ರಶಸ್ತಿ ಏಕೆ ಲಭಿಸಿಲ್ಲ?



ಆ ಆವರಣದತ್ತ ಯಾನ ಕವಲಾಗಿ, ಭಿತ್ತಿಯ ಮೇಲೆ ನಿರಾಕರಣದ ಗ್ರಹಣ ನೆಲೆಯಾಗಿದೆಯಂತೆ.

ಕೆ.ಪಿ. ಸುಜ್ಞಾನಾಚಾರ್ಯ, ಕಲಿಕೆರೆ

◆ ಕೆಲವು ಯುವತಿಯರ ಅರೆನಗ್ನ ಫೋಟೊಗಳು ಅವರ ತೃಪ್ತಿಗೋ ಅಥವ ನಮ್ಮ ಮನಸ್ಸನ್ನು ಹಾಳು ಮಾಡಲೋ?

ನಿಮ್ಮ ವಿಷಯ ಹೇಳಿ. ನೀವು ಆ ಫೋಟೊದಲ್ಲಿ ಕಾಣುವುದು ಆಕೃತಿಯನ್ನೋ, ಪ್ರಕೃತಿಯನ್ನೋ, ವಿಕೃತಿಯನ್ನೋ?

■ ರಾಮ್